ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

## DALITHA SANGARSHA SAMMITTEE

ಸಂಯೋಜಕ Co-Ordinator

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ

BANGALORE NORTH TALUK SAMMITTEE

DSS (S) UNITY IS STRENGTH DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – 560 089.
Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089.

**ಬಿ. ಶ್ರೀನಿವಾಸ್**
ಸಂಯೋಜಕರು, ಬೆಂಗಳೂರು ಉತ್ತರ ತಾಲ್ಲೂಕು

Mob : 9448174834
9632314659

ರವರಿಗೆ,

ದಿನಾಂಕ:16-10-2009

ಮಾನ್ಯ ಸಂಪಾದಕರು/ನಿರ್ದೇಶಕರು,

..............................
ಬೆಂಗಳೂರು.

**"ಪ್ರಕಟಣಾ ಕೃಪೆಗಾಗಿ"**

ಮಾನ್ಯರೇ,

ವಿಷಯ:-ಮಾವಳ್ಳಿಪುರದ ವ್ಯಾಪ್ತಿಯಲ್ಲಿರುವ ಕಸ ಸಂಗ್ರಹಣಾ ಘಟಕ (ರಾಮ್ಕಿ ಸಂಸ್ಥೆ) ಯಿಂದ ಗ್ರಾಮಗಳ ಸುತ್ತ ಮುತ್ತಲಿನ ಪರಿಸರ ಮಲೀನವಾಗುತ್ತಿರುವುದನ್ನು ತಡೆಗಟ್ಟಬೇಕು ಹಾಗೂ ಕಸ ಸಂಗ್ರಹಣ ಘಟಕವನ್ನು ಕೂಡಲೇ ಸ್ಥಗಿತಗೊಳಿಸಿ ಹಾಗೂ ಸ್ಥಳಾಂತರಿಸಲು ಕೋರಿ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ಉತ್ತರ ತಾಲ್ಲೂಕು, ಮಾವಳ್ಳಿಪುರ ಗ್ರಾಮದ ಸರ್ವೆ 8ನೇ ನಂಬರಿನ ಜಮೀನಿನಲ್ಲಿ ಕಸ ಸಂಗ್ರಹಣಾ ಘಟಕ (ಡಪಿಂಗ್ ಯಾರ್ಡ್)ನಿರ್ಮಿಸಿರುವುದು ಸರಿಯಷ್ಟೆ. M.S.W (Management & Handling) Rules 2000ರ ಅನ್ವಯ ಎಲ್ಲಾ ಷರತ್ತುಗಳ ಆಧಾರದ ಮೇಲೆ ತ್ಯಾಜ್ಯ ವಸ್ತುಗಳ ಸಂಗ್ರಹಣೆ ಹಾಗೂ ಶೇಖರಣೆ ಮಾಡುವ ಜವಾಬ್ದಾರಿಯನ್ನು ರಾಮ್ಕಿ ಸಂಸ್ಥೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೀಡಿರುತ್ತದೆ. ಆದರೆ ರಾಮ್ಕಿ ಸಂಸ್ಥೆಯ ಅಧಿಕಾರಿಗಳು ಕಸ ಸಂಗ್ರಹಣೆ ಹಾಗೂ ಶೇಖರಣೆಯ ಬಗ್ಗೆ ಯಾವುದೇ ರೀತಿಯ ವೈಜ್ಞಾನಿಕ ರೀತಿಯಲ್ಲಿ ನಿರ್ವಹಿಸುತ್ತಿಲ್ಲ. ಇತ್ತೀಚಗೆ ಘನ ತ್ಯಾಜ್ಯಗಳಿಂದ ಕೊಳೆತು ಬರುವ ವಿಷಪೂರಿತ ಲಿಚೆಟ್ ನೀರನ್ನು ಉದ್ದೇಶ ಪೂರ್ವಕವಾಗಿ ಲಿಚೆಟ್ ಟ್ಯಾಂಕಿನಿಂದ ಲಕ್ಷಾಂತರ ಲೀಟರ್ ನೀರನ್ನು ಹೊರಗೆ ಬಿಟ್ಟಿದ್ದರಿಂದ ಕಾಲುವೆಗಳ ಮೂಲಕ ಮಾವಳ್ಳಿಪುರ ಕೆರೆಗೆ ಲಿಚೆಟ್ ನೀರುವ ಹರಿದು ಹೋಗಿ ತುಂಬಿಕೊಂಡಿದೆ. ಇದರಿಂದ ಕೆರೆಯ ನೀರು ಮಲಿನವಾಗಿದ್ದು, ಇದರ ವಾಸನೆಯಿಂದ ಸೊಳ್ಳೆ, ನೊಣ, ಕ್ರಿಮಿಕೀಟಗಳು ಹೆಚ್ಚಿದ್ದು, ಸಾಂಕ್ರಮಿಕ ರೋಗಗಳು ಹರಡುವ ಸಾಧ್ಯತೆ ಇದೆ ಹಾಗೂ ಲಿಚೆಟ್ ನೀರು ಭೂಮಿಯಲ್ಲಿ ಹಿಂಗುವುದರಿಂದ ಅಂತರ್ ಜಲಕ್ಕೆ ಹೋಗಿ ಬೋರ್‌ವೆಲ್‌ಗಳ ಕುಡಿಯುವ ನೀರು ಸಹ ಮಲಿನವಾಗುತ್ತದೆ. ಹಾಗೂ ಕೆರೆಯಲ್ಲಿರುವ ನೀರನ್ನು ಜಾನುವಾರುಗಳು, ಪ್ರಾಣಿ ಪಕ್ಷಿಗಳು ಕುಡಿಯಲು ಸಾಧ್ಯವಾಗದೇ ಯಾವುದೇ ರೀತಿಯ ಅನುಕೂಲಕ್ಕೆ ಬರದ ರೀತಿಯ ವಿಷಪೂರಿತ ನೀರು ನಿಂತಿದೆ. ಇದರಿಂದ ಜನರು ಮತ್ತು ಜಾನುವಾರುಗಳು ತತ್ತರಿಸಿ ಹೋಗಿದ್ದಾರೆ. ಇದೇ ರೀತಿ ಸತತವಾಗಿ ಸುಮಾರು ನಾಲ್ಕು ವರ್ಷಗಳಿಂದ ಇಂತಹ ಒಂದಲ್ಲ ಒಂದು ರೀತಿಯ ಹಿಂಸೆಯನ್ನು ಪರಿಸರ ಜೀವಿಗಳು ಅನುಭವಿಸಿಕೊಂಡು ಬರುತ್ತಿದ್ದಾರೆ.

ಉದಾಹರಣೆಗೆ ಸುಬೇದಾರ್ ಪಾಳ್ಯದ ಬೈಲಪ್ಪ ಹಾಗೂ ಇತರರು ಜಾರಕಬಂಡೆಕಾವಲ್ ಅರಣ್ಯ ಪ್ರದೇಶದ ಜಮೀನು ಹಾಗೂ ಇತ್ಯಾದಿ ಜಮೀನುಗಳಲ್ಲಿ ಅಕ್ರಮವಾಗಿ ಲಕ್ಷಾಂತರ ಟನ್ ತ್ಯಾಜ್ಯವನ್ನು ಅನಧಿಕೃತವಾಗಿ ಡಂಪ್ ಮಾಡಿಸಿಕೊಂಡು, ಯಾವುದೇ ರೀತಿಯ ವೈಜ್ಞಾನಿಕ ಸಲಕರಣೆಗಳನ್ನು ಬಳಸದೇ ತ್ಯಾಜ್ಯಕ್ಕೆ ಬೆಂಕಿ ಹಚ್ಚಿ ಹೊಗೆ ವಾಸನೆಗಳಿಂದ ಹಾಗೂ ಉದ್ದೇಶಪೂರ್ವಕವಾಗಿ ಲಿಚೆಟ್ ನೀರು ಕೆರೆಗೆ ಹರಿದುಹೋಗುವಂತೆ ಮಾಡಿದ್ದರು. ಇದರಿಂದ ಅಕ್ಕಪಕ್ಕದ ಎಲ್ಲಾ ಗ್ರಾಮಗಳ ಜನರು ಮತ್ತು ಜಾನುವಾರುಗಳಿಗೆ ಹಲವಾರು ಖಾಯಿಲೆಗಳು ಹರಡಿ ಸಾವು ನೋವಿನಿಂದ ಇದುವರೆವಿಗೂ ಇಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ವಿರೋಧ ಮಾಡುತ್ತಲೆ ಬಂದಿದ್ದಾರೆ. ಇದರ ಮಧ್ಯೆಯೇ ಕಸ ಸಂಗ್ರಹಣಾ ಘಟಕ ನಿರ್ಮಾಣವಾಯಿತು ಈ ಘಟಕ ಸ್ಥಾಪನೆಯ ವಿರೋಧಕ್ಕೆ ರೈತರು, ಪರಿಸರವಾದಿಗಳು ಹಾಗೂ ಡಿ.ಎಸ್.ಎಸ್ ಪದಾಧಿಕಾರಿಗಳು ನಿರಂತರವಾಗಿ ಹಲವಾರು ಹೋರಾಟಗಳನ್ನು ನಡೆಸಿ ಮನವಿ ಸಲ್ಲಿಸುತ್ತಿದ್ದಾರೆ. ಹಾಗೂ ಈ ಸಮಸ್ಯೆಗಳ ಬಗ್ಗೆ ದಿನಾಂಕಃ24-10-2005ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಹಾಗೂ ಸದಸ್ಯ ಕಾರ್ಯದರ್ಶಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ಮನವಿ ಸಲ್ಲಿಸಲಾಗಿತ್ತು.

ಬೆಂಗಳೂರು ನಗರ ಹೈಟೆಕ್ ನಗರವೆಂದು ಹೆಸರುವಾಸಿಯಾಗಿದ್ದು, ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಸಹ ಪರಿಸರ ಮಾಲಿನ್ಯ ನಿಯಂತ್ರಿಸಿಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಫಲವಾಗಿದೆ. ಈ ಘಟಕದಿಂದ ವಿಮಾನ ನಿಲ್ದಾಣಗಳು ಸುಮಾರು 6 ರಿಂದ 7 ಕಿಲೋಮೀಟ್ ಅಂತರದಲ್ಲಿರುತ್ತದೆ. ಈ ಘಟಕ ಬೆಂಗಳೂರಿನಿಂದ ಸುಮಾರು 14.5 ಕಿಲೋಮೀಟರ್ ಹತ್ತಿರವಿದೆ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರು ಹರಿದು ಹೋಗುವ ಪ್ರದೇಶವು ಸಹ ಇದಾಗಿದೆ. ಈ ಘಟಕದಿಂದ ಗ್ರಾಮಗಳು ತುಂಬಾ ಹತ್ತಿರವಿದ್ದು, ಇಂತಹ ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ಪರಿಸರವಾದಿಗಳಾದ ನಾವೆಲ್ಲರೂ ಸಹ ಮಾನವೀಯ ಮೌಲ್ಯಗಳನ್ನು ಅರಿತು ಈ ಕಸ ಸಂಗ್ರಹಣಾ ಘಟಕದಿಂದ ಆಗುವ ತೊಂದರೆಗಳನ್ನು ತಪ್ಪಿಸಬೇಕಾಗಿದೆ. ದಿನೇ ದಿನೇ ಇದೇ ರೀತಿ ನಿರಂತರವಾಗಿ ಪರಿಸರ ಮಾಲಿನ್ಯದಿಂದ ಪರಿಸರ ಜೀವಿಗಳಿಗೆ ಒಳ್ಳೆಯ ಗಾಳಿ, ನೀರು ಸಿಗದೇ ಜನರು ಹಾಗೂ ಜಾನುವಾರುಗಳು ಗ್ರಾಮಗಳನ್ನು ಬಿಟ್ಟು ವಲಸೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ. ಆದ್ದರಿಂದ ತಾವುಗಳು ರಾಮ್ಕಿ ಸಂಸ್ಥೆಯ ಈ ಕಸ ಸಂಗ್ರಹಣಾ ಘಟಕವನ್ನು ಕೂಡಲೇ ಸ್ಥಗಿತಗೊಳಿಸಬೇಕು ಹಾಗೂ ಈಗಾಗಲೇ ಕೆರೆಯಲ್ಲಿ ನಿಂತಿರುವ ಲಿಚೆಟ್ ನೀರಿಗೆ ಹಾಗೂ ಎಲ್ಲಾ ಗ್ರಾಮಗಳಲ್ಲಿಯೂ ಸಹ ಔಷಧಿ ಸಿಂಪಡಿಸಬೇಕು ಹಾಗೂ ಪರಿಸರ ಮಾಲಿನ್ಯ ಉಂಟು ಮಾಡಿ ಕೆರೆಯ ನೀರನ್ನು ಮಲಿನ ಮಾಡಿರುವ ರಾಮ್ಕಿಯ ಸಂಸ್ಥೆಯ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಈ ಮೂಲಕ ಸಮಿತಿಯು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತದೆ ಎಂದು ರಾಮ್ಕಿ ಸಂಸ್ಥೆಯ ಘಟಕದ ಮುಂದೆ ದರಣಿ ನಡೆಸಿ ಸಮಸ್ಯೆಗಳ ಬಗ್ಗೆ ತಿಳಿಸಲಾಗಿತ್ತು ನಂತರ ದರಣಿ ಕಾರ್ಯಕ್ರಮದ ಸ್ಥಳಕ್ಕೆ ಧಾವಿಸಿದ ಬಿ.ಬಿ.ಎಂ.ಪಿಯ ಮಾನ್ಯ ಆರೋಗ್ಯ ಆಯುಕ್ತರು ಸ್ಥಳಕ್ಕೆ ಬೇಟಿ ನೀಡಿ ಕೆರೆಯ ನೀರು ಕಲುಷಿತವಾಗಿರುವ ಬಗ್ಗೆ ಹಾಗೂ ಪರಿಸರ ಮಲಿನವಾಗಿರುವ ಬಗ್ಗೆ ನಮ್ಮಿಂದ ತಪ್ಪಾಗಿದೆ ಇಪ್ಪತ್ತಾನಾಲ್ಕು ಗಂಟೆಯ ಒಳಗೆ ಕಲುಷಿತವಾಗಿರುವ ನೀರನ್ನು ವೈಜ್ಞಾನಿಕ ಸಲಕರಣೆಗಳಿಂದ ಲಿಚೆಟ್ ನೀರನ್ನು ವಾಪಸ್ಸು ತೆಗೆದು ಹಾಗೂ ಅಕ್ಕಪಕ್ಕದ ಎಲ್ಲಾ ಗ್ರಾಮಗಳಲ್ಲಿ ಸೊಳ್ಳೆ ನೊಣ ಹಾಗೂ ಕ್ರಿಮಿ ಕೀಟಗಳನ್ನು ನಿಯಂತ್ರಿಸಿಸಲು ಔಷಧಿ ಸಿಂಪಡಿಸುತ್ತೇವೆ ಇನ್ನು ಮುಂದೆ ಈ ರೀತಿ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ

ಶಿಕ್ಷಣ ಸಂಘಟನೆ ಹೋರಾಟ



# ದಲಿತ ಸಂಘರ್ಷ ಸಮಿತಿ

DALITHA SANGARSHA SAMMITTEE

ಸಂಯೋಜಕ Co-Ordinator

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ

BANGALORE NORTH TALUK SAMMITTEE

DSS (S) DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – 560 089.

Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089.

**ಬಿ. ಶ್ರೀನಿವಾಸ್**
**ಸಂಯೋಜಕರು, ಬೆಂಗಳೂರು ಉತ್ತರ ತಾಲ್ಲೂಕು**

Mob : 9448174834
9632314659



ಹಾಗೂ ಇನ್ನಿತರ ಸಮಸ್ಯೆಗಳ ಬಗ್ಗೆ ದಿನಾಂಕ:07-10-2009ರಂದು ಸಭೆ ಕರೆದು ತಿರ್ಮಾನಿಸಲಾಗುವುದು, ಸಭೆಗೆ ಬನ್ನಿ ಎಂದು ಆಹ್ವಾನಿಸಿದರು ಅದರಂತೆ ನಾವುಗಳು ದಿನಾಂಕ:07-10-2009ರಂದು ರಾಮ್ಕಿ ಸಂಸ್ಥೆಯ ಘಟಕದ ಕಛೇರಿಗೆ ಹೋಗುವ ದಾರಿಯಲ್ಲಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಶ್ರೀ.ವಿರೂಪಾಕ್ಷ ಮೈಸೂರ ಹಾಗೂ ಎ.ಇ.ಇಂಜಿನಿಯರ್ ರಂಗಯ್ಯ ಇತರರು ಗುಂಪು ಕಟ್ಟಿಕೊಂಡು ಬಂದು ಏಕಾಏಕಿ ನಮ್ಮ ಮೇಲೆ ಅವಾಚ್ಯವಾಗಿ ನಿಂದಿಸುತ್ತಾ ಜಗಳ ಮಾಡಿ ಹೊಡೆದು ನಮ್ಮನ್ನು ಹಲ್ಲೆ ಮಾಡಿ ಕೊಲೆ ಬೆದರಿಗೆ ಹಾಕಿದರು ಕೂಡಲೇ ಸ್ಥಳಕ್ಕೆ ಧಾವಿಸಿದ ಪೋಲಿಸ್ ಅಧಿಕಾರಿಗಳು ಬಿ.ಬಿ.ಎಂ.ಪಿ ಮಾನ್ಯ ವಿಶೇಷ ಆಯುಕ್ತರು ಹಾಗೂ ಬಿ.ಬಿ.ಎಂ.ಪಿ ಟಾಸ್ಕ್ ಕೋರ್ಸ್ ಐ.ಜಿ.ಪಿ ಸಾಹೇಬರನ್ನು ಸ್ಥಳಕ್ಕೆ ಕರೆಯಿಸಿದರು ಇವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದರು ಪದಾಧಿಕಾರಿಗಳಾದ ನಾವುಗಳು ಇಲ್ಲಿನ ಸಮಸ್ಯೆಗಳನ್ನು ತಿಳಿಸುತ್ತಾ ಈ ಘಟಕವನ್ನು ಸ್ಥಗಿತಗೊಳಿಸುವಂತೆ ಮನವಿ ಸಲ್ಲಿಸಲಾಗಿತ್ತು ಈ ಬಗ್ಗೆ ಮಾನ್ಯ ಆಯುಕ್ತರೊಂದಿಗೆ ಸಭೆ ಕರೆದು ಚರ್ಚಿಸಿ ತಿರ್ಮಾನಿಸಲಾಗುವುದು ದಿನಾಂಕ:09-10-2009ರಂದು ಬೆಂಗಳೂರು ಬಿ.ಬಿ.ಎಂ.ಪಿ ಕೇಂದ್ರ ಕಛೇರಿಗೆ ಬನ್ನಿ ಎಂದು ಆಹ್ವಾನಿಸಿದರು ನಂತರ ನಾವುಗಳೆಲ್ಲರೂ ಕೊನೆಗೆ ವಾಪಸ್ಸು ಬಂದೆವು ನಂತರ ಜಂಟಿ ಆಯುಕ್ತರಾದ ಶ್ರೀ.ವಿರೂಪಾಕ್ಷ ಮೈಸೂರ ಹಾಗೂ ಎ.ಇ.ಇಂಜಿನಿಯರ್ ರಂಗಯ್ಯ ಇವರುಗಳು ಉದ್ದೇಶಪೂರ್ವಕವಾಗಿ ನಮ್ಮ ಶಾಂತಿಯುತ ಹೋರಾಟವನ್ನು ಮೊಟಕುಗೊಳಿಸಲು ನಮ್ಮ ಮೇಲೆ ಪೋಲೀಸ್ ಠಾಣೆಯಲ್ಲಿ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಕಂಪ್ಲೇಂಟ್ ನೀಡಿರುತ್ತಾರೆ. ಪೋಲೀಸ್ ಅಧಿಕಾರಿಗಳು ನಮ್ಮನ್ನು ರಾತ್ರೋರಾತ್ರಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದರು ನಾವುಗಳು ಜಾಮೀನಿನ ಮೇಲೆ ಬಂದಿರುತ್ತೇವೆ ಅದರಂತೆ ನಾವುಗಳು ದಿನಾಂಕ:09-10-2009ರಂದು ಬಿ.ಬಿ.ಎಂ.ಪಿ ಕೇಂದ್ರ ಸಭೆಗೆ ಹಾಜರಾಗಿ ಈ ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ಆಯುಕ್ತರಿಗೆ ತಿಳಿಸಿದಾಗ ಮಾನ್ಯ ಆಯುಕ್ತರು ಪರಿಸರ ಮಲಿನ ಮಾಡಿರುವ ಬಗ್ಗೆ ತಪ್ಪಿಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ತಿಳಿಸಿದರು. ಸುಳ್ಳು ಕೇಸ್ ದಾಖಿಲು ಮಾಡಿರುವನ್ನು ವಾಪಸ್ಸು ತೆಗೆಸುತ್ತೇನೆ ಹಾಗೂ ಎಲ್ಲಾ ಗ್ರಾಮಗಳಲ್ಲೂ ವೈಧ್ಯಕೀಯ ಆರೋಗ್ಯ ತಪಾಸಣೆ, ಜಾನುವಾರುಗಳ ತಪಾಸಣೆ, ಪರಿಸರ ತಪಾಸಣೆ ಹಾಗೂ ವೈಜ್ಞಾನಿಕ ಸಲಕರಣೆಗಳನ್ನು ಮಾಡುತ್ತೇವೆ ಎಂದು ತಿಳಿಸಿದರು. ನಾವುಗಳು ಘಟಕವನ್ನು ಸ್ಥಗಿತ ಗೊಳಿಸಿ ಎಂದು ಮಾಡಿದ ಮನವಿಯ ಬಗ್ಗೆ ವಿಮಾನ ನಿಲ್ದಾಣಗಳು ಈ ಘಟಕಕ್ಕೆ ತುಂಬಾ ಹತ್ತಿರವಿದ್ದು ತೊಂದರೆಯಾಗುವ ಬಗ್ಗೆ ಡಿಫೆನ್ಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಹಾಗೂ ಹಲವಾರು ಷರತ್ತುಗಳ ಬಗ್ಗೆ ಚರ್ಚಿಸಿ ಈ ಘಟಕವನ್ನು ಸ್ಥಳಾಂತರಿಸುತ್ತೇವೆ ಎಂದು ಆಶ್ವಾಸನೆ ನೀಡಿದರು.

ಆದರೆ ಈ ಎಲ್ಲಾ ಅಶ್ವಾಸನೆಗಳು ಹಿಂದಿನಿಂದ ಬಂದು ಹೋಗಿರುವ ಎಲ್ಲಾ ಆಯುಕ್ತರುಗಳ ಆಶ್ವಾಸನೆಗಳು ಹುಸಿಯಾಗುತ್ತಲೇ ಇವೆ. ಇದುವರೆವಿಗೂ ಸಹ ಜನರು ಹಾಗೂ ಜಾನುವಾರುಗಳು ಈ ಎಲ್ಲಾ ಮಾರಣಾಂತಿಕ ಸಮಸ್ಯೆಗಳನ್ನು ಎದುರಿಸುತ್ತಾ ಸಾಂಕ್ರಮಿಕ ರೋಗಗಳು ಹರಡಿ ತತ್ತರಿಸಿ ಹೋಗಿ ನೆರೆ ಹಾವಳಿ ಪ್ರದೇಶಕ್ಕೆ ಉದಾಹರಣೆಯಾಗಿದೆ ಇಂತಹ ಸತತ ಹಿಂಸೆಯಿಂದ ಜನರು ವಲಸೆ ಹೋಗುವಂತ ಪ್ರಯತ್ನಕ್ಕೆ ಕಾಲಿಟ್ಟಿದ್ದಾರೆ. ಆದ್ದರಿಂದ ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಈ ಎಲ್ಲಾ ಸಂಘಟನೆಗಳ ಕಾರ್ಯಕರ್ತರು, ಪರಿಸರ ತಜ್ಞರು, ಪರಿಸರವಾದಿಗಳು ಸೇರಿ ಪರಿಸರ ಉಳಿವಿಗಾಗಿ ಉಗ್ರ ಹೋರಾಟದ ಹೆಜ್ಜೆ ಇಡಬೇಕಾಗುತ್ತದೆ.

ಒತ್ತಾಯಗಳು :

1.ಕಾನೂನು ಬಾಹಿರವಾಗಿ ನಡೆಸುತ್ತಿರುವ ಕಸ ಸಂಗ್ರಹಣ ಘಟಕವನ್ನು ಕೂಡಲೇ ಸ್ಥಗಿತಗೊಳಿಸಿ ಸ್ಥಳಾಂತರ ಗೊಳಿಸಬೇಕು.

2.ಮಾವಳ್ಳಿಪುರದ ಕೆರೆಯ ನೀರು ಕಲುಷಿತವಾಗಿದ್ದು, ನೀರನ್ನು ಹೊರ ತೆಗೆದು ಜನರು ಹಾಗೂ ಜಾನುವಾರುಗಳಿಗೆ ಅನುಕೂಲವಾಗುವ ರೀತಿ ಪರ್ಯಾಯ ವ್ಯವಸ್ಥೆ ಮಾಡಬೇಕು.

3.ಎಲ್ಲಾ ಗ್ರಾಮಗಳಲ್ಲಿ ವೈದ್ಯಕೀಯ ಆರೋಗ್ಯ ತಪಾಸಣೆ ಮಾಡಬೇಕು ಹಾಗೂ ಇದರಿಂದ ಅನ್ಯಾಯಕ್ಕೆ ಒಳಗಾದ ಕುಟುಂಬಗಳಿಗೆ ಪರಿಹಾರ ನೀಡಬೇಕು.

4.ಜಾರಕಬಂಡೆಕಾವಲ್ ಅರಣ್ಯಭೂಮಿ ಹಾಗೂ ಮಾವಳ್ಳಿಪುರ ಸರ್ವೆ ನಂ.8ರ ಹಾಗೂ ಇತ್ಯಾದಿ ಜಮೀನಿನಲ್ಲಿರುವ ಅನಧಿಕೃತವಾಗಿ ಲಕ್ಷಾಂತರ ಟನ್ ತ್ಯಾಜ್ಯವನ್ನು ವಾಪಸ್ಸು ತೆಗೆಯಬೇಕು ಹಾಗೂ ಈ ಪ್ರದೇಶವನ್ನು ಪರಿಸರ ಮಾಲಿನ್ಯ ರಹಿತ ಪ್ರದೇಶವನ್ನಾಗಿ (ಡಿಕಂಟಾಮ್ಮಿನೇಟ್) ಮಾಡಬೇಕು.

5.ಇದರ ಪೂರ್ವಕವಾಗಿ ಸಾರ್ವಜನಿಕರ ಮೂಲಕ ಜಂಟಿ ಸಮಿತಿ ರಚಿಸಬೇಕು.

6.ದಲಿತ ನಾಯಕರುಗಳ ಮೇಲೆ ಸುಳ್ಳು ಕೇಸ್ ದಾಖಲಿಸಿರುವುದನ್ನು ವಾಪಸ್ಸು ಪಡೆಯಬೇಕು.

7.ಜಂಟಿ ಆಯುಕ್ತರಾದ ಶ್ರೀ.ವಿರೂಪಾಕ್ಷ ಮೈಸೂರ ಹಾಗೂ ಇಂಜಿನೀಯರ್ ರಂಗಯ್ಯ ಎಂಬುವರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕು.

**ಆದ್ದರಿಂದ ಈ ಕೂಡಲೇ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರುಗಳು ಈ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಮಿತಿಯು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತದೆ.**

ವಂದನೆಗಳೊಂದಿಗೆ

ಇಂತಿ

**Environmental support Group**

**Leo Francis saldanha**

Bhargavi S. Rao

**Bhargavi Rao**

ಬಿ.ಶ್ರೀನಿವಾಸ್